


# ಅಧ್ಯಾಯ ೫ ಅವನತಿಯ ಕಾಲ


ಶ್ರೀ ಕ್ಷೇತ್ರ

# ಅಧ್ಯಾಯ ೫



ಮೈಸೂರಿನ ರಾಜ ಒಡೆಯರ್

## ಅವನತಿಯ ಕಾಲ

ದಖ್ಖನ್ ಪ್ರದೇಶದ ಬಲಿಷ್ಠ ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿಯು ಹದಗೆಟ್ಟು, ವಿಭಜನೆಯಾಯಿತು. ಅವರ ಆಳ್ವಿಕೆಯ ನಂತರದ ಕಾಲವು ಗೊಂದಲ, ಅನಿಶ್ಚಿತತೆಗಳಿಂದ ಕೂಡಿದ ಪರಿಸ್ಥಿತಿಯಾಗಿತ್ತು. ವಿಜಯನಗರದ ಆಳ್ವಿಕೆಯು ಆ ನಂತರದ ಎರಡು ಶತಮಾನಗಳ ಕಾಲ ಮುಂದುವರೆದರೂ, ಹಿಂದಿನ ಕಾಲದ ಅಧಿಕಾರ ಹಾಗೂ ಪ್ರಭಾವಗಳು ಕಾಣಲಿಲ್ಲ .ಈ ಅವಧಿಯಲ್ಲಿ, ವಿಜಯನಗರದ ಅರಸರ ರಾಜವಂಶಿಕ ಔನ್ನತ್ಯವು ಹಿನ್ನಡೆ ಪಡೆಯಿತು. ಕರ್ನಾಟಕದ ದಕ್ಷಿಣ ಭಾಗವು ಸಣ್ಣ ಸಣ್ಣ ಭಾಗವಾಗಿ ವಿಭಜಿಸಲ್ಪಟ್ಟು, ಅವನ್ನು ಸಣ್ಣ ಸಣ್ಣ ಪಾಳೇಗಾರರು ಆಳತೊಡಗಿದರು. ಅವರು ವಿಜಯನಗರದ ಸಾರ್ವಭೌಮತ್ವವನ್ನು ಅಂಗೀಕರಿಸಿದರೂ, ಸ್ವತಂತ್ರವಾಗಿ ಆಳಲು ಇಚ್ಛಿಸಿದರು ರಾಜ್ಯದ ಹದಗೆಡುತ್ತಿರುವ ಪರಿಸ್ಥಿತಿಯಲ್ಲಿ ರಾಜನ ವೈಯಕ್ತಿಕ ಸಾಮರ್ಥ್ಯ ಹಾಗೂ ಅಧಿಕಾರವು ಹೆಚ್ಚು ಮುಖ್ಯವಾಯಿತು.

ಮೈಸೂರು ಹಾಗೂ ಕೆಳದಿಯ ರಾಜ ಮನೆತನಗಳ ಉದಯವು ಇದಕ್ಕೆ ವಿಭಿನ್ನವಾದುದು. ತಮ್ಮ ತಮ್ಮ ಪ್ರಾಂತಗಳಲ್ಲಿ, ಈ ಎರಡೂ ಮನೆತನಗಳು ವಿಜಯನಗರದ ಸಂಪ್ರದಾಯವನ್ನು ಮುಂದುವರಿಸುವ ಯತ್ನವನ್ನು ಮಾಡುವ ಮೂಲಕ ಪರಿಸ್ಥಿತಿಯ ಸುಧಾರಣೆಗೆ ಗಮನಾರ್ಹ ಕೊಡುಗೆ ನೀಡಿದವು. ಮೈಸೂರಿನ ರಾಜ ಒಡೆಯರ್ ಹಾಗೂ ಚಿಕ್ಕದೇವರಾಯರು; ಹಾಗೂ ಕೆಳದಿಯ ವೆಂಕಟಪ್ಪ ಹಾಗೂ ಶಿವಪ್ಪನಾಯಕರು ಸಾಮರ್ಥ್ಯ ಹಾಗೂ ನಿರಂತರ ಯತ್ನಗಳ ಮೂಲಕ, ವಿಜಯನಗರದ ಪರಂಪರೆಯನ್ನು ಮುಂದುವರಿಸಿದರು.ಇತರ ಕೆಲವು ಅರಸರೂ, ಬದಲಾದ ಪರಿಸ್ಥಿತಿಗೆ ಅನುಗುಣವಾದ

ಆಡಳಿತಾತ್ಮಕ ಬದಲಾವಣೆಗಳನ್ನು ತಮ್ಮ ರಾಜ್ಯಗಳಲ್ಲಿ ಮಾಡಿದರು.ಪ್ರಜೆಗಳ ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ಸುಧಾರಣೆಗಾಗಿ, ಅನೇಕ ಪ್ರಜಾಕಲ್ಯಾಣ ಚಟುವಟಿಕೆಗಳನ್ನೂ ಕೈಗೊಂಡರು.

ಉತ್ತರ ಕರ್ನಾಟಕ ಭಾಗದಲ್ಲಿ, ೧೭ನೆಯ ಶತಮಾನದ ಅಂತ್ಯದವರೆಗೆ, ಆದಿಲ್ ಶಾಹಿಗಳು ತಮ್ಮ ಪ್ರಬಲ ಆಳ್ವಿಕೆಯನ್ನು ಮುಂದುವರಿಸಿದರು. ಮುಘಲರ ನಿರಂತರ ದಾಳಿಗಳಿಂದ ಬಿಜಾಪುರದ ಆದಿಲ್ ಶಾಹಿ ಆಳ್ವಿಕೆಯೂ ಕೊನೆಗೊಂಡಿತು. ರಾಜಕೀಯ ಅಸ್ಥಿರತೆಯ ಪ್ರಯೋಜನವನ್ನು ಪಡೆದುಕೊಂಡು, ದಕ್ಷಿಣ ಕರ್ನಾಟಕದಲ್ಲಿ ಸ್ಥಳೀಯ ಸಾಮಂತರು ಕೆಲವು ಸಣ್ಣ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು, ಅಲ್ಲಿ ತಮ್ಮನ್ನು ಅರಸರಾಗಿ ಸ್ಥಾಪಿಸಿಕೊಂಡರು.ಈ ಅವಧಿಯಲ್ಲಿ, ನೆರೆಯ ರಾಜ್ಯಗಳ ಮರಾಠರು ಹಾಗೂ ಅಸಫ್‌ಜಾಹಿಗಳು, ಈ ಪ್ರದೇಶಗಳಲ್ಲಿ ತಮ್ಮ ರಾಜ್ಯ ವಿಸ್ತರಣೆಯನ್ನು ಮಾಡಿಕೊಂಡರು.ಡೆಕ್ಕನ್‌ನ ಈ ಎರಡು ಬಲಿಷ್ಠ ಅರಸರಿಗೆ, ಜನರ ಒಳಿತಿಗಿಂತ, ನಾಡಿನ ಸಂಪತ್ತನ್ನು ದೋಚುವಲ್ಲಿ ಹೆಚ್ಚು ಆಸಕ್ತಿ ಇತ್ತು.ಸ್ಥಳೀಯ ಅಧಿಕಾರಿಗಳು, ಅವರೊಂದಿಗೆ ನಿರ್ಲಜ್ಜೆಯಿಂದ ಕೈ ಜೋಡಿಸಿದರು; ಇದರಿಂದ, ಈ ಅವಧಿಯಲ್ಲಿ ಕರ್ನಾಟಕವು ಎಲ್ಲ ರೀತಿಯಿಂದಲೂ ಸಂಕಷ್ಟವನ್ನು ಅನುಭವಿಸಿತು.

## ಕೆಳದಿಯ ನಾಯಕರು

ಕ್ರಿ.ಶ.೧೬–೧೮ನೆಯ ಶತಮಾನದ ಅವಧಿಯಲ್ಲಿ ಕರ್ನಾಟಕದ ಇತಿಹಾಸದಲ್ಲಿ ಕೆಳದಿ ಹಾಗೂ ಮೈಸೂರು ಪ್ರಮುಖ ಪಾತ್ರ ವಹಿಸಿದವು.ಈ ಎರಡೂ ಸಂಸ್ಥಾನಗಳು ವಿಜಯನಗರದ ಅರಸರಿಗೆ ಸಾಮ್ರಾಜ್ಯದ ಕೊನೆಯವರೆಗೂ ನಿಷ್ಠಾವಂತವಾಗಿದ್ದು, ವಿಜಯನಗರದ ಪರಂಪರೆ ಹಾಗೂ ಸಂಪತ್ತುಗಳನ್ನು ಬಳುವಳಿಯಾಗಿ ಪಡೆದುಕೊಂಡವು. ಅಲ್ಲದೆ, ಚಿತ್ರದುರ್ಗ, ಬೆಂಗಳೂರು, ಚನ್ನಪಟ್ಟಣ, ರಾಯದುರ್ಗ, ಹರಪನಹಳ್ಳಿ, ಬಸವಪಟ್ಟಣ, ಬಿಳಗಿ, ಸೋಂದ, ಮುಂತಾದವುಗಳಿಗಿಂತ ಹೋಲಿಕೆಯಲ್ಲಿ ಗಾತ್ರ ಹಾಗೂ ಪ್ರಾಮುಖ್ಯತೆಯಲ್ಲಿ ಇವೆರಡೂ ದೊಡ್ಡದಾರಾಗಿವು.

ವಿಜಯನಗರ ಸಾಮ್ರಾಜ್ಯದ ಸಾಮಂತರಾದ ನಾಯಕರಿಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿಂದು ಇರುವ ಕೆಳದಿ ಎಂಬ ಪುಟ್ಟ ಗ್ರಾಮ ಹಿಂದೆ ರಾಜಧಾನಿಯಾಗಿತ್ತು. ನಂತರ, ಇಕ್ಕೇರಿ ಹಾಗೂ ಬಿದನೂರುಗಳಿಗೆ ರಾಜಧಾನಿಯನ್ನು ವರ್ಗಾವಣೆ ಮಾಡಿದರೂ, ಅವರ ಆಳ್ವಿಕೆಯ ಅಂತ್ಯದವರೆಗೂ ಕೆಳದಿಯು ಮುಖ್ಯ ಪಟ್ಟಣವಾಗಿಯೇ ಉಳಿಯಿತು. ಹೊಯ್ಸಳ, ದ್ರಾವಿಡ ಹಾಗೂ ಇಸ್ಲಾಮಿಕ್ ಶೈಲಿಯ ಕಟ್ಟಡ ನಿರ್ಮಾಣ ಕಲೆಯನ್ನು ಪ್ರತಿಬಿಂಬಿಸುವ ರಾಮೇಶ್ವರ, ವೀರಭದ್ರ ಹಾಗೂ ಪಾರ್ವತಿ ದೇವಾಲಯಗಳು ಈ ಪಟ್ಟಣದಲ್ಲಿವೆ. ಲಿಂಗಣ್ಣನ ಕನ್ನಡ ಕತೆ 'ಕೆಳದಿಕೃತಿ ಪವಿಜಯ', ಹಾಗೂ ರಾಜಕುಮಾರ ಬಸವರಾಜನ ಶಿವತತ್ವರತ್ನಾಕರ ಗಳಂತಹ ಸಾಹಿತ್ಯ ಕೃತಿಗಳಲ್ಲದೆ ನೂರಾರು ಶಾಸನಗಳು, ಕೆಳದಿ ರಾಜ್ಯದ ಇತಿಹಾಸವನ್ನು ಬಿಚ್ಚಿಡುತ್ತವೆ.

ಕಥೆಯೊಂದರ ಪ್ರಕಾರ, ಕೆಳದಿ ಗ್ರಾಮದ ರೈತನಾದ ಚೌಡಪ್ಪಗೌಡನಿಗೆ, ತನ್ನ ಹೊಲವನ್ನು ಉಳುವಾಗ, ನಿಧಿಯೊಂದು ದೊರೆಯಿತು. ಈ ಅಪಾರ ಸಂಪತ್ತಿನಿಂದ, ಆತನು ಗ್ರಾಮದ ಮುಖ್ಯಸ್ಥನಾದನು. ಅವನಿಗೆ ದೃಢವಾದ ನಾಯಕತ್ವದ ಗುಣಗಳಿದ್ದು, ಗ್ರಾಮದಲ್ಲಿ ಯುವಸೈನ್ಯವನ್ನು ಕಟ್ಟಿದನು. ಇದರಿಂದ ಅವನ ಸಾಮರ್ಥ್ಯವನ್ನು ಅರಿತ ವಿಜಯನಗರದ ಅರಸರು, ಅವನನ್ನು ಗುರುತಿಸಿ, ಕೆಳದಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಉಸ್ತುವಾರಿಯನ್ನು ಅವನಿಗೆ ವಹಿಸಿದರು. ಅವನಿಗೆ ನಾಯಕ ಎಂಬ ಬಿರುದು ನೀಡಿ, ಕೆಳದಿ ಚೌಡಪ್ಪ ನಾಯಕ ಎಂದು ಕರೆದರು.



ಅಘೋರೇಶ್ವರ ದೇವಾಲಯ, ಶಿವಮೊಗ್ಗ ಜಿಲ್ಲೆ

ಚೌಡಪ್ಪ ನಾಯಕನ ಮಗನಾದ ಸದಾಶಿವ ನಾಯಕನು (ಕ್ರಿ.ಶ.೧೫೩೦–೬೬) ಶೌರ್ಯ ಹಾಗೂ ಸಾಮರ್ಥ್ಯಗಳಿಂದ ವಿಜಯನಗರದ ರಾಮರಾಯನ ಗಮನವನ್ನು ಸೆಳೆದನು. ಬಿಜಾಪುರದ ಸುಲ್ತಾನನಾದ ಒಂದನೆಯ ಇಬ್ರಾಹಿಂ ಆದಿಲ್ ಶಾ ವಿರುದ್ಧದ ಯುದ್ಧದಲ್ಲಿ, ಆತನನ್ನು ಸೇನಾಧಿಪತಿಯಾಗಿ ರಾಮರಾಯನು ನೇಮಕ ಮಾಡಿದ್ದನು. ಕಲ್ಯಾಣದ ಕೋಟೆಯನ್ನು ವಶಪಡಿಸಿಕೊಂಡು, ರಾಮರಾಯನ ಆಪ್ತನಾಗಿ, ಆತನೊಂದಿಗೆ ಹಲವಾರು ದಂಡಯಾತ್ರೆಗಳಲ್ಲಿ ಪಾಲ್ಗೊಂಡನು.ಆತನ ಸೇವಾ ಸಾಧನೆಗಳಿಗೆ ಮನ್ನಣೆ ನೀಡಿ, 'ಕೋಟೆ ಕೋಲಾಹಲ' ಮುಂತಾದ ಬಿರುದುಗಳಿಂದ ಅವನನ್ನು ಗೌರವಿಸಲಾಯಿತು. ಚಂದ್ರಗುತ್ತಿ, ಮಂಗಳೂರು ಹಾಗೂ ಬಾರಕೂರುಗಳ ಉಸ್ತುವಾರಿಯನ್ನೂ ಅವನಿಗೆ ನೀಡಿದರು. ಈ ಅವಧಿಯಲ್ಲಿ, ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಲಾಯಿತು. ಬಂದರುಗಳ ಮೂಲಕ, ಕರಾವಳಿ ಕರ್ನಾಟಕದ ವ್ಯಾಪಾರಿ ಚಟುವಟಿಕೆ ಹಾಗೂ ಸಾಗರೋತ್ತರ ವ್ಯಾಪಾರಿ ಚಟುವಟಿಕೆಗಳ ಮೂಲಕ, ಸದಾಶಿವ ನಾಯಕನು ಪೋರ್ಚುಗೀಸ್, ಡಚ್ ಹಾಗೂ ಬ್ರಿಟೀಷರ ಸಂಪರ್ಕಕ್ಕೆ ಬಂದನು.



*ರಾಮೇಶ್ವರ ದೇವಾಲಯ ಕೆಳದಿಯ, ಶಿವಮೊಗ್ಗ ಜಿಲ್ಲೆ*

ಈ ರಾಜಮನೆತನದ ಮತ್ತೊಬ್ಬ ಗಮನಾರ್ಹ ಅರಸನೆಂದರೆ, ಕ್ರಿ.ಶ.೧೫೮೬–೧೬೨೯ರವರೆಗೆ ಅಧಿಕಾರದಲ್ಲಿದ್ದ ವೆಂಕಟಪ್ಪ ನಾಯಕ. ಅರವೀಡು ಮನೆತನದ ಸಹೋದರರ ನಡುವಣ ಸಂಘರ್ಷಗಳ ಪ್ರಯೋಜನವನ್ನು ಪಡೆದುಕೊಂಡು, ಈತನು ಸ್ವತಂತ್ರನಾದನು. ಈತನನ್ನು ಸದೆಬಡಿಯಲು, ಆತನ ವಿರುದ್ಧ ಬಿಜಾಪುರದ ಸುಲ್ತಾನನು ದೊಡ್ಡ ಸೈನ್ಯವನ್ನು ಕಳುಹಿಸಿದನಾದರೂ ಪ್ರಯೋಜನವಾಗಲಿಲ್ಲ. ಬಿಜಾಪುರದ ಸುಲ್ತಾನನ ಸಾಮಂತಳಾದ ಗೇರುಸೊಪ್ಪೆಯ ಚನ್ನಭೈರದೇವಿಯನ್ನು ಸೋಲಿಸಿ, ಆ ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಈ ವಿಜಯದ ಸ್ಮಾರಕವಾಗಿ, ಹಾನಗಲ್‌ನಲ್ಲಿ ವಿಜಯ ಗೋಪುರವನ್ನು ನಿರ್ಮಾಣ ಮಾಡಲಾಯಿತು.ವೆಂಕಟಪ್ಪನ ಆಳ್ವಿಕೆಯಲ್ಲಿ ರಾಜ್ಯದಲ್ಲಿ ನೆಲೆಸಿದ್ದ ಸುಭಿಕ್ಷೆಯ ಉಜ್ವಲ ವೃತ್ತಾಂತವನ್ನು ಇಟಲಿಯ ಯಾತ್ರಿಕ ಪಿಯೆಟ್ರೊ ಡೆಲ್ಲ ವೆಲ್ಲ ನೀಡಿದ್ದಾನೆ.ಶಿವಮೊಗ್ಗ, ಮಂಗಳೂರು ಹಾಗೂ ಕರಾವಳಿ ಪ್ರದೇಶಗಳವರೆಗೆ ರಾಜ್ಯವನ್ನು ವಿಸ್ತರಿಸಿದ ಇವನು, ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ವರ್ಗಾಯಿಸಿದನು. ಈತನ ರಾಜ್ಯದ ಕರಾವಳಿ ಪ್ರದೇಶದಲ್ಲಿದ್ದ ಪೋರ್ಚುಗೀಸರೊಡನೆ ಸ್ನೇಹಪರ ಸಂಬಂಧವನ್ನು ಹೊಂದಿದ್ದ ಸಮರ್ಥ ಆಡಳಿತಗಾರ ಮಾತ್ರವಲ್ಲದೆ, ಶ್ರದ್ಧಾಭಕ್ತಿಯುಳ್ಳವನೂ ಆಗಿದ್ದನು. ವೈಯಕ್ತಿಕವಾಗಿ ಆತನು ವೀರಶೈವ ಮತದ ಅನುಯಾಯಿಯಾಗಿದ್ದರೂ, ಇತರ ಎಲ್ಲ ಧರ್ಮಗಳತ್ತ ಸಹಿಷ್ಣತೆಯನ್ನು ತೋರಿದ್ದು, ಶೃಂಗೇರಿ ಮಠ ಹಾಗೂ ಹಲವಾರು ಮಸೀದಿಗಳಿಗೆ ಧಾರಾಳವಾಗಿ ದತ್ತಿ–ದಾನಗಳನ್ನು ನೀಡಿದ್ದನು.

ಕ್ರಿ.ಶ.೧೬೪೫–೬೦ರವರೆಗೆ ಆಳಿದ ಶಿವಪ್ಪ ನಾಯಕನು, ಮೈಸೂರು, ಹಾಸನ, ಹಾಗೂ ಚಿಕ್ಕಮಗಳೂರು ಪ್ರದೇಶಗಳಿಗೆ ತನ್ನ ರಾಜ್ಯವನ್ನು ವಿಸ್ತರಿಸಿದ ಮತ್ತೊಬ್ಬ ಮಹಾನ್ ಅರಸ.ಈತನು ಆಡಳಿತದಲ್ಲಿ ಹಲವಾರು ಪರಿವರ್ತನಾತ್ಮಕ ಬದಲಾವಣೆಗಳನ್ನು ತಂದು, ರಾಜ್ಯದ ಬೊಕ್ಕಸದ ಸುಧಾರಣೆಯ ಉದ್ದೇಶದೊಂದಿಗೆ, ಸಿಸ್ತು ಎಂಬ ನೂತನ ಭೂಕಂದಾಯ ವ್ಯವಸ್ಥೆಯನ್ನು ಪರಿಚಯಿಸಿದನು. ಕೃಷಿ ಹಾಗೂ ವ್ಯಾಪಾರಿ ಚಟುವಟಿಕೆಗಳಿಗೂ ಉತ್ತೇಜನ ದೊರೆಯಿತು. ಮಂಗಳೂರು, ಕುಂದಾಪುರ ಹಾಗೂ ಹೊನ್ನಾವರಗಳಲ್ಲಿದ್ದ ಪೋರ್ಚುಗೀಸರು ಸ್ವೇಚ್ಛಾಪ್ರವೃತ್ತರೂ, ಗರ್ವಿಗಳೂ ಆಗಿದ್ದರಿಂದ ತನ್ನ ರಾಜ್ಯದಲ್ಲಿದ್ದ ಅವರ ಸಂಸ್ಥೆ ಹಾಗೂ ಕಾರ್ಖಾನೆಗಳಿಂದ ಶಿವಪ್ಪ ನಾಯಕನು ಅವರನ್ನು ಓಡಿಸಿದನು. ಹಾಗಾಗಿ, ಶಿವಪ್ಪ ನಾಯಕನು 'ಪಡುಗಡಲ ಒಡೆಯ' ಅಥವಾ 'ಪಶ್ಚಿಮ ಸಮುದ್ರದ ಒಡೆಯ' ನೆಂಬ ಬಿರುದನ್ನು ಧರಿಸಿದನು. ಇತರರತ್ತ ತೋರಿದ ಹೃದಯ ವೈಶಾಲ್ಯತೆ ಹಾಗೂ ಕಾರುಣ್ಯಕ್ಕಾಗಿಯೂ ಶಿವಪ್ಪ ನಾಯಕನು ಹೆಸರುವಾಸಿಯಾಗಿದ್ದನು. ವಿಜಯನಗರದ ಅರವೀಡು ರಾಜವಂಶದ ಕೊನೆಯ ರಾಜನಾದ ಮುಮ್ಮಡಿ ಶ್ರೀರಂಗನು ಬಿಜಾಪುರದ ಸುಲ್ತಾನನಿಂದ ಸೋಲಿಸಲ್ಪಟ್ಟು ಅಧಿಕಾರ ವಂಚಿತನಾದಾಗ, ಶಿವಪ್ಪ ನಾಯಕನು ಆತನಿಗೆ ಆಶ್ರಯವನ್ನು ನೀಡಿದ್ದಲ್ಲದೆ, ಬೇಲೂರು ಹಾಗೂ ಸಕ್ರೆಪಟ್ಟಣಗಳನ್ನು ಉಂಬಳಿಯಾಗಿ ನೀಡಿದ್ದನು.

ಶಿವಪ್ಪ ನಾಯಕನ ನಂತರ ಕೆಳದಿ ಸಂಸ್ಥಾನವು ಅಶಕ್ತಗೊಳ್ಳುವ ಮೂಲಕ ತನ್ನ ಸ್ವತಂತ್ರ ಸ್ಥಾನಮಾನವನ್ನು ಕಳೆದುಕೊಂಡಿತು. ಕೆಳದಿಯ ಉತ್ತರ ಭಾಗಗಳನ್ನು ಬಿಜಾಪುರದ ಸುಲ್ತಾನರು ವಶಪಡಿಸಿಕೊಂಡರು; ನಂತರ ಇದು ಮರಾಠರ ಕೈಗೆ ಸೇರಿತು. ಮೈಸೂರಿನ ಒಡೆಯರೂ, ತಮ್ಮ ರಾಜ್ಯವನ್ನು ಉತ್ತರದತ್ತ, ಕೆಳದಿಯ ರಾಜ್ಯದೊಳಗೆ ವಿಸ್ತರಿಸಿಕೊಂಡರು. ತಗ್ಗಿದ ಅಧಿಕಾರ ಹಾಗೂ ಕುಗಿದ ರಾಜ್ಯವುಳ್ಳವರಾಗಿ, ಕೆಳದಿಯ ಅರಸರು ೧೮ನೆಯ ಶತಮಾನದ ಮಧ್ಯಭಾಗದವರೆಗೂ ಸುಳಿದಾಡಿದರು. ಇಂತಹ ಅಸಹಾಯಕ ಸ್ಥಿತಿಯಲ್ಲೂ, ಕೆಳದಿಯ ರಾಣಿಯಾದ ಚೆನ್ನಮ್ಮಾಜಿಯು ಕ್ರಿ.ಶ.೧೬೭೧–೯೭ರವರೆಗೆ ಆಳಿ, ಔರಂಗಜ಼ೇಬನ ಹಿಡಿತದಿಂದ ತಪ್ಪಿಸಿಕೊಂಡ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿ, ಆತನು ತನ್ನ ರಾಜ್ಯ ತಲುಪಲು ನೆರವು ನೀಡಿದಳು.

ನಿರ್ಣಾಯಕ ಘಟ್ಟಗಳಲ್ಲಿ ಕೆಳದಿಯು ತನ್ನ ರಾಜಕೀಯ ಮಿತ್ರರೊಂದಿಗೆ ಸ್ಥಿರವಾಗಿ ನಿಂತರೂ, ಕ್ರಿ.ಶ.೧೭೬೩ರಲ್ಲಿ ಹೈದರ್ ಆಲಿಯು ಧಾಳಿ ನಡೆಸಿ, ರಾಣಿ ವೀರಮ್ಮಾಜಿಯನ್ನು ಸೆರೆಹಿಡಿದಾಗ, ಅವರು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಇದರ ಅಪಾರ ಸಂಪತ್ತನ್ನು ಪಡೆದುಕೊಂಡು, ಹೈದರಾಲಿಯು ಮೈಸೂರು ಸಂಸ್ಥಾನದಲ್ಲಿ ಗಣನೀಯ ಅಧಿಕಾರವನ್ನು ಪಡೆದುಕೊಂಡನು.

## ಮರಾಠರು

ಬಿಜಾಪುರದ ಒಡೆತನವಿದ್ದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತಿದ್ದ ಮರಾಠರು, ತುಂಗಭದ್ರೆಯ ಉತ್ತರ ಕರ್ನಾಟಕದ ಕೆಲವು ಭಾಗಗಳ ಮೇಲೆ ನಿಯಂತ್ರಣವನ್ನು ಪಡೆಯಲು ಪ್ರಾರಂಭಿಸಿದರು. ಶಿವಾಜಿಯು ಉತ್ತರ ಕರ್ನಾಟಕದ ರಾಮದುರ್ಗ, ನರಗುಂದ, ಪರಸಘಡ್, ಗಜೇಂದ್ರಗಡ್, ಕಡಕೊಳು, ಮುಂತಾದ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಾಣ ಮಾಡಿದನು. ದಕ್ಷಿಣದಲ್ಲಿ ಬೆಂಗಳೂರು ಜಾಗೀರ್‌ನ ಆಡಳಿತವನ್ನು ಕ್ರಿ.ಶ.೧೬೩೭–೬೩ರವರೆಗೆ ಶಾಹಜಿ ಹಾಗೂ ಆತನ

***ಶಿವಪ್ಪ ನಾಯಕನ ಕೋಟೆ, ನಗರ್ (ಬಿದನೂರು) ಶಿವಮೊಗ್ಗ ಜಿಲ್ಲೆ***



ನಂತರ ಆತನ ಮಗನಾದ ಏಕೋಜಿಯು ನೋಡಿಕೊಳ್ಳುತ್ತಿದ್ದನು. ಕ್ರಿ.ಶ.೧೬೮೭ರಲ್ಲಿ, ಬೆಂಗಳೂರು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಮೈಸೂರು ರಾಜಮನೆತನವು ಮೊಗಲರಿಂದ ಪಡೆಯಿತು. ಅದಕ್ಕೂ ಮೊದಲು ಕ್ರಿ.ಶ.೧೬೮೬ರಲ್ಲಿ ಬಿಜಾಪುರದ ಮರಾಠ ಸಾಮಂತ ರಾಜನಿಂದ ಮೊಗಲರು ಈ ಪ್ರದೇಶಗಳನ್ನು ಗೆದ್ದಿದ್ದರು.

ಕ್ರಿ.ಶ.೧೭೧೯ರಲ್ಲಿ, ಛತ್ರಪತಿ ಶಾಹುನ (ಶಿವಾಜಿಯ ಮೊಮ್ಮಗ) ಕಾಲದಲ್ಲಿ, ಮೊಗಲರ ದಕ್ಷಿಣ ಸಾಮಂತರಿಂದ ಚೌಥ್ ಹಾಗೂ ಸರ್ದೇಶ್‌ಮುಖಿ ತೆರಿಗೆಗಳನ್ನು ಸಂಗ್ರಹ ಮಾಡುವ ಹಕ್ಕನ್ನು ಮರಾಠರು ಪಡೆದುಕೊಂಡರು.ಕ್ರಿ.ಶ.೧೭೫೩ರಲ್ಲಿ, ಪೇಶ್ವೆ ಬಾಲಾಜಿ ರಾವ್ ಧಾರವಾಡವನ್ನು ಗೆದ್ದಿದ್ದು ಆ ನಂತರ ಮರಾಠರಿಂದ ಧಾರವಾಡ ಪ್ರದೇಶವನ್ನು ಹೈದರ್ ಹಾಗೂ ಟಿಪ್ಪು ಕಸಿದುಕೊಂಡರು. ಕ್ರಿ.ಶ.೧೭೯೧ರಲ್ಲಿ ಮರಾಠರಿಗೆ ಧಾರವಾಡವನ್ನು ಹಿಂತಿರುಗಿಸಿದರೂ, ಕ್ರಿ.ಶ.೧೮೧೮ರಲ್ಲಿ ಪೇಶ್ವೆ ಪತನದ ನಂತರ, ಅಂತಿಮವಾಗಿ ಅದು ಬ್ರಿಟಿಷರಿಗೆ ವಶವಾಯಿತು.

## ಮೈಸೂರಿನ ಒಡೆಯರು

ಸಂಪ್ರದಾಯಗಳನ್ನು ಜೀವಂತವಾಗಿ ಇಡುವುದರ ಜೊತೆಗೆ ಅದನ್ನು ತಮ್ಮ ಆಳ್ವಿಕೆಯಲ್ಲಿ ಮುಂದುವರಿಸುವ ಮೂಲಕ, ಕರ್ನಾಟಕದ ಸಾಂಸ್ಕೃತಿಕ ಸಂಪತ್ತಿಗೆ ಗಮನಾರ್ಹವಾದ ಕೊಡುಗೆಯನ್ನು ನೀಡಿದ, ಹಿಂದಿನ ಪ್ರಸಿದ್ಧ  ರಾಜರ ಪಥವನ್ನೇ ಮೈಸೂರಿನ ಒಡೆಯರು ಅನುಸರಿಸಿದರು.

ರಾಜವಂಶದ ಅಂಕುರಕ್ಕೆ ಸಂಬಂಧಿಸಿದ್ದಂತೆ ಇರುವ ಸಾಂಪ್ರದಾಯಿಕ ವೃತ್ತಾಂತವು ಸ್ವಾರಸ್ಯವಾಗಿದೆ. ಆಳರಸರ ಪ್ರಕಾರ, ಮೈಸೂರಿನ ಬಳಿಯಿರುವ ಹದಿನಾಡಿಗೆ ಬಂದ ವಿಜಯ ಹಾಗೂ ಕೃಷ್ಣರೆಂಬ ಯಾದವ ಸಹೋದರರು ಬಂದವರು, ಕಾರುಗಹಳ್ಳಿಯ ಮುಖ್ಯಸ್ಥನಾದ ಮಾರನಾಯಕನಿಗೆ ಯುವತಿಯೊಬ್ಬಳನ್ನು ಬಲವಂತದಿಂದ ಮದುವೆ ಮಾಡುತ್ತಿರುವುದನ್ನು ತಪ್ಪಿಸಿದ ಇವರು ಆಕೆಗೆ ನೆರವಾದರು. ನಂತರ, ಅವಳು ವಿಜಯನನ್ನು ಮದುವೆಯಾದಳು. ಆತನು ಒಡೆಯರ್ ಎಂಬ ಬಿರುದನ್ನು ಧರಿಸಿ, ಹದಿನಾಡು ಹಾಗೂ ಕಾರುಗಹಳ್ಳಿಗಳನ್ನು ಒಳಗೊಂಡ ಸಂಸ್ಥಾನವನ್ನು ಆಳಿದನು. ಆದರೆ, ಶಿಲಾಶಾಸನಗಳು, ಈ ಕಥೆಯ ಬೇರೆ ಅವತರಣಿಕೆಯನ್ನು ನೀಡುತ್ತವೆ. ಅವುಗಳ ಪ್ರಕಾರ, ಹಾಗೂ ಯಾದವ ಕುಲಕ್ಕೆ ಸೇರಿದ ಚಂದ್ರ ವಂಶದ ಇಬ್ಬರು ರಾಜಕುಮಾರರು ಹದಿನಾಡಿಗೆ ಬಂದು ಅದರ ಸೌಂದರ್ಯದಿಂದ ಪ್ರೇರಿತರಾಗಿ, ಮಹಿಷಾಪುರದಲ್ಲಿ (ಮೈಸೂರು) ನೆಲೆಸಿ, ಅಧಿಕಾರ ಸ್ಥಾಪಿಸುವ ಮೂಲಕ ಮೈಸೂರಿನ ಒಡೆಯರ ರಾಜಮನೆತನದ ಮೂಲಪುರುಷರಾದರು.

ಕ್ರಿ.ಶ.೧೫೭೮–೧೬೧೭ರಿಂದ ಆಳಿದ ರಾಜ ಒಡೆಯರ್‌ನಿಂದ ಮೈಸೂರಿನ ಇತಿಹಾಸವು ಪ್ರಾರಂಭವಾಗುತ್ತದೆ. ಅರವೀಡು ಕುಟುಂಬವು ಆತನನ್ನು ರಾಜ್ಯಪಾಲನನ್ನಾಗಿ ಅಂಗೀಕರಿಸಿತು ಅದರಂತೆ ಕನ್ನಂಬಾಡಿ, ತಲಕಾಡು ಹಾಗೂ ಇತರ ಕಿರಿಯ ಮುಖ್ಯಸ್ಥರನ್ನು ಸೋಲಿಸುವುವ

ಮೂಲಕ ಈ ಮೊದಲಿನ ಮೈಸೂರು ಜಿಲ್ಲೆಯ ಬಹುತೇಕ ಭಾಗಗಳನ್ನು ಒಳಗೊಂಡಂತೆ ತನ್ನ ರಾಜ್ಯವನ್ನು ವಿಸ್ತರಿಸಿದ ಇವನು ಕ್ರಿ.ಶ.೧೬೧೦ರಲ್ಲಿ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ವಿಜಯನಗರದ ಸ್ಥಳೀಯ ರಾಜ್ಯಪಾಲನಾದ ಚನ್ನಪಟ್ಟಣದ ಜಗದೇವರಾಯನಿಂದ ಹಲವಾರು ಸ್ಥಳಗಳನ್ನು ಪಡೆದನು. ರಾಜ ಒಡೆಯನು ದಸರಾ ಸಮಾರಂಭವನ್ನು ಪ್ರಾರಂಭ ಮಾಡಿ, ಆ ಮೂಲಕ ವಿಜಯನಗರದ ಸಂಪ್ರದಾಯವನ್ನು ಮುಂದುವರಿಸುವ ತನ್ನ ಉದ್ದೇಶವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟನು.

ಕ್ರಿ.ಶ.೧೬೧೭–೩೭ರವರೆಗೆ ಆಳಿದ ಚಾಮರಾಜ ಒಡೆಯರ್, ರಾಜ ಒಡೆಯರ್‌ನ ಉತ್ತರಾಧಿಕಾರಿಯಾಗಿದ್ದು, ಚನ್ನಪಟ್ಟಣದ ಜಗದೇವರಾಯನ ಉಳಿದ ಪ್ರದೇಶಗಳನ್ನು ಗೆದ್ದುಕೊಂಡನು.ಗದ್ಯ ರೂಪದಲ್ಲಿ, ವಾಲ್ಮೀಕಿ ರಾಮಾಯಣದ ಕನ್ನಡ ಅವತರಣಿಕೆಯಾದ 'ಚಾಮರಾಜೋಕ್ತಿವಿಲಾಸ'ವನ್ನು ಆತನು ರಚಿಸಿದ್ದಾನೆ. ಆತನ ನಂತರ ಇಮ್ಮಡಿ ರಾಜ ಒಡೆಯನು ಸಿಂಹಾಸನವನ್ನು ಏರಿದನು, ಆದರೆ ಅದಾದ ಸ್ವಲ್ಪ ದಿನಗಳಲ್ಲೇ ಅವನನ್ನು ವಿಷ ಹಾಕಿ ಕೊಲ್ಲಲಾಯಿತು.

ಬೆಟ್ಟದ ಚಾಮರಾಜ ಒಡೆಯರ್ ನಂತರ ಆತನ ಮಗನಾದ ಒಂದನೆಯ ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ.೧೬೩೮–೫೯) ಸಿಂಹಾಸನವನ್ನು ಏರಿದನು. ಮೈಸೂರನ್ನು ಧಾಳಿ ಮಾಡಿದ ರಣದುಲ್ಲಾ ಖಾನನ ನೇತೃತ್ವದ ಬಿಜಾಪುರ ಸೈನ್ಯವನ್ನು ಸೋಲಿಸಿದನು. ದಕ್ಷಿಣದಲ್ಲಿ ಪಿರಿಯಪಟ್ಟಣ, ಸತ್ಯಮಂಗಲ ಹಾಗೂ ಡಣ್ಣಾಯಕನ ಕೋಟೆ, ಉತ್ತರದಲ್ಲಿ ಹೊಸೂರು ಹಾಗೂ ಪಶ್ಚಿಮದಲ್ಲಿ ಅರಕಲಗೂಡು ಹಾಗೂ ಬೆಟ್ಟದಪುರಗಳನ್ನು ಗೆದ್ದು, ಮೈಸೂರನ್ನು ಎಲ್ಲಾ ದಿಕ್ಕುಗಳಲ್ಲೂ ವಿಸ್ತರಿಸಿದನು. ಬೆಂಗಳೂರಿನ ಕೆಂಪೇಗೌಡನನ್ನು ಕಪ್ಪ ನೀಡಲು ಒತ್ತಾಯಿಸಿದನು. ಭಿನ್ನಮತೀಯ ಚಟುವಟಿಕೆಗಳನ್ನು ಸಂಪೂರ್ಣ ನಿಯಂತ್ರಿಸಿದನ್ನು ಪಡೆದನು. ರಾಜ್ಯದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಯನ್ನು ತಂದು, ಟಂಕಸಾಲೆಯನ್ನು ಸ್ಥಾಪಿಸಿ, ಅಲ್ಲಿ ಆತನ ಹೆಸರಿನ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು.



ದಸರಾ ಮೆರವಣಿಗೆ, ಮೈಸೂರು

ಕಂಠೀರವ ನರಸರಾಜನಿಗೆ ಮಕ್ಕಳಿಲ್ಲದ ಕಾರಣ, ಬೋಳ ಚಾಮರಾಜ ಒಡೆಯರ್ ಮೊಮ್ಮಗನಾದ ದೊಡ್ಡದೇವರಾಜನನ್ನು ದತ್ತು ತೆಗೆದುಕೊಳ್ಳಲಾಯಿತು. ಕ್ರಿ.ಶ.೧೬೫೯–೭೩ರವರೆಗೆ ಆಳಿದ ಅವನು, ಕೆಳದಿ ನಾಯಕರು ಹಾಗೂ ಮಧುರೈ ಧಾಳಿಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಅರವೀಡು ಅರಸನಾದ ಮುಮ್ಮಡಿ ಶ್ರೀರಂಗನ ನಿಯಂತ್ರಣದಲ್ಲಿದ್ದ ಸಕ್ರೆಪಟ್ಟಣ, ಹಾಸನ ಮುಂತಾದ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡನು. ಈರೋಡ್ ಹಾಗೂ ಧರ್ಮಪುರಿಗಳನ್ನೂ ವಶಪಡಿಸಿಕೊಳ್ಳಲಾಯಿತು. ಕ್ರಿ.ಶ.೧೬೭೩ರಲ್ಲಿ ಆತನು ಚಿಕ್ಕನಾಯಕನಹಳ್ಳಿಯಲ್ಲಿ ಮಡಿದನು.

ಕ್ರಿ.ಶ.೧೬೭೩–೧೭೦೪ರವರೆಗೂ ಆಳಿದ ಚಿಕ್ಕದೇವರಾಯನು, ಮೈಸೂರಿನ ಅತ್ಯಂತ ಪ್ರಖ್ಯಾತ ಅರಸರಲ್ಲಿ ಒಬ್ಬನಾಗಿದ್ದು, ಆತನು ಸಿಂಹಾಸನವನ್ನೇರಿದ ತಕ್ಷಣ, ವಿಶಾಲಾಕ್ಷ ಪಂಡಿತನನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಿಕೊಂಡನು. ಚಿಕ್ಕಮಗಳೂರು, ಹಾಸನ, ತುಮಕೂರು ಹೊಸಕೋಟೆ, ಸೇಲಂ ಹಾಗೂ ಬಾರಾಮಹಲ್‌ಗಳ ಬಹುತೇಕ ಭಾಗಗಳನ್ನು ದಿಗ್ವಿಜಯದ ಮೂಲಕ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ವೆಂಕೋಜಿಯಿಂದ ಜಾಗೀರಾಗಿ ಬೆಂಗಳೂರನ್ನು ಪಡೆದುಕೊಂಡ ಮೊಗಲ್ ಸೇನಾಧಿಪತಿಯಾದ ಖಾಸಿಂಖಾನನು, ಅದನ್ನು ಚಿಕ್ಕದೇವರಾಯನಿಗೆ ಮೂರು ಲಕ್ಷ ರೂಪಾಯಿಗಳಿಗೆ ಮಾರಿದನು. ತನ್ನ ಸೇನಾಧಿಪತಿಯಾದ ದೊಡ್ಡಯ್ಯನ ನೆರವಿನೊಂದಿಗೆ ಮೈಸೂರಿನ ಮೇಲೆ ಧಾಳಿ ಮಾಡಿ, ಕೊಳ್ಳೆ ಹೊಡೆದ ಶಿವಾಜಿಯನ್ನು ಯಶಸ್ವಿಯಾಗಿ ನಿಗ್ರಹಿಸಿದನು. ಆತನ ಸಾಮರ್ಥ್ಯವನ್ನು ಮನಗಂಡ ಔರಂಗಜೇಬನು, ಆತನಿಗೆ ಜಗ್‌ದೇವ್‌ರಾಜ್ (ಜಗದೇವರಾಯ) ಎಂಬ ಬಿರುದನ್ನು ಇತ್ತನು. ಆತನಿಗೆ ಅಪ್ರತಿಮವೀರನೆಂಬ ಬಿರುದೂ ಸಂದಿತ್ತು. ಈ ಅವಧಿಯಲ್ಲಿ, ಮಧುರೈನ ಚೊಕ್ಕನಾಥನು ರುಸ್ತಮ್ ಖಾನನ ವಿರುದ್ಧ ಮೈಸೂರಿನ ನೆರವನ್ನು ಕೋರಿದ್ದನು. ದಳವಾಯಿ ಕುಮಾರಯ್ಯನು ರುಸ್ತಮ್ ಖಾನನನ್ನು ನಿಗ್ರಹಿಸಿ, ತಿರುಚನಾಪಲ್ಲಿಯನ್ನು ಮೈಸೂರಿನ ಭಾಗವಾಗಿಸಿದನು. ರಾಜ ಚೊಕ್ಕನಾಥನು ಈ ವಿಚಾರವನ್ನು ವಿರೋಧಿಸಿ, ದಳವಾಯಿ ಕುಮಾರಯ್ಯನನ್ನು ಸೆರೆಹಿಡಿಯಲು, ಮರಾಠರ ನೆರವನ್ನು ಬಯಸಿದನು. ಚಿಕ್ಕದೇವರಾಯನಿಗೆ ಇಕ್ಕೇರಿಯ ಅರಸರೊಂದಿಗೂ ಕಾಳಗ ನಡೆದಿತ್ತು. ಆತನ ಮರಣದ ಸಮಯದಲ್ಲಿ, ರಾಜ್ಯದ ಗಡಿಯು ಉತ್ತರದಲ್ಲಿ ಚಿಕ್ಕಮಗಳೂರಿನ ಪರ್ವತ ಶ್ರೇಣಿಗಳು ಹಾಗೂ ತುಮಕೂರು, ದಕ್ಷಿಣದಲ್ಲಿ ಅಣ್ಣಾಮಲೈ ಹಾಗೂ ಪಳನಿ, ಪೂರ್ವದಲ್ಲಿ ಸೇಲಂ ಹಾಗೂ ಪಶ್ಚಿಮದಲ್ಲಿ ಬೇಲೂರು ಹಾಗೂ ಕೊಡಗಿನವರೆಗೂ ವ್ಯಾಪಿಸಿತ್ತು.

ಸ್ವತಃ ವಿದ್ವಾಂಸನಾಗಿದ ವಿಶಾಲಾಕ್ಷ ಪಂಡಿತ, ತಿರುಮಲಯ್ಯಂಗಾರ್, ಷಡಾಕ್ಷರ ಕವಿ ಹಾಗೂ ಕರಣೀಕ ಲಿಂಗಯ್ಯನಂತಹ ಪ್ರತಿಷ್ಠಿತ ಚಿಕ್ಕದೇವರಾಯನ ಮಂತ್ರಿಮಂಡಲದಲ್ಲಿದ್ದು, ದಳವಾಯಿ ಕುಮಾರಯ್ಯನು ಆತನ ಮಾವನಾಗಿದ್ದನು. ದೊಡ್ಡಯ್ಯ, ತಿಮ್ಮಪ್ಪಯ್ಯ ಹಾಗೂ ಮಲ್ಲರಾಜಯ್ಯನಂತಹವರು ಆತನಿಗೆ ಆಡಳಿತದಲ್ಲಿ ನೆರವು ನೀಡುತ್ತಿದ್ದರು. ಆತ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಸುಧಾರಣೆಗಳನ್ನು ಪರಿಚಯಿಸಿದನು - ಅದರ ಪೈಕಿ, ಅಂಚೆ ಸೇವಾ ಜಾಲವನ್ನು ಪರಿಚಯಿಸಿದ್ದು ಅತ್ಯಂತ ಮುಖ್ಯವಾದುದು.

ಕ್ರಿ.ಶ.೧೭೦೪ರಲ್ಲಿ ಚಿಕ್ಕದೇವರಾಯನ ಮರಣಾನಂತರ, ಆತನ ಉತ್ತರಾಧಿಕಾರಿಯು ಅಸಮರ್ಥನಾದ್ದರಿಂದ, ಮೈಸೂರಿನ ಅರಸರ ಅಧಿಕಾರ ಹಾಗೂ ಸಂಪತ್ತುಗಳು ಇಳಿಮುಖವಾಯಿತು. ರಾಜ್ಯದ ಆಡಳಿತವು ದಳವಾಯಿಗಳ ಕೈಸೇರಿತು. ದಳವಾಯಿಗಳು ರಾಜವಂಶಕ್ಕೆ ಸೇರಿಲ್ಲದ್ದರಿಂದ, ಸಾಮಂತರು ಹಾಗೂ ಅಧಿಕಾರಿಗಳು ಅವರ ಆದೇಶ ಧಿಕ್ಕರಿಸುವುದರ ಜೊತೆಗೆ, ಸವಾಲನ್ನೂ ಒಡ್ಡಿದರು. ನಂತರ ಒಂದನೆಯ ಕೃಷ್ಣರಾಜ (ಕ್ರಿ.ಶ.೧೭೧೪-೩೨), ಏಳನೆಯ ಚಾಮರಾಜ (ಕ್ರಿ.ಶ.೧೭೩೨-೩೪) ಹಾಗೂ ಇಮ್ಮಡಿ ಕೃಷ್ಣರಾಜರು (ಕ್ರಿ.ಶ.೧೭೩೪-೬೬) ಅವರನ್ನು ಅಂಗೀಕರಿಸದ ಕಾರಣ, ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ರಾಜವಂಶದ ಸದಸ್ಯರ ನಡುವಣ ಆಂತರಿಕ ಭಿನ್ನಾಭಿಪ್ರಾಯಗಳ ಲಾಭವನ್ನು ಪಡೆದು, ನಿಜಾಮ್ ಹಾಗೂ ಗುತ್ತಿಯ ಘೋರ್ಪಡೆಯೂ ಸೇರಿದಂತೆ, ಇತರ ಶತ್ರುರಾಜರು, ಕ್ರಿ.ಶ.೧೭೨೪ರಲ್ಲಿ ಮೈಸೂರಿನ ಮೇಲೆ ಧಾಳಿ ನಡೆಸಿ, ಮೈಸೂರು ಅರಸರಿಂದ ಕಪ್ಪ ಕಾಣಿಕೆಯಾಗಿ ಒಂದು ಕೋಟಿ ರೂಪಾಯಿಗಳನ್ನು ಪಡೆದುಕೊಂಡರು.ಕ್ರಿ.ಶ.೧೭೨೭ರಲ್ಲಿ, ಒಂದನೆಯ ಬಾಜಿರಾವ್ ಕೂಡ, ಮೈಸೂರಿನಿಂದ ಇಪ್ಪತ್ತೊಂದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದನು. ಮುಘಲರಿಗೆ ಸಲ್ಲಬೇಕಾದ ಬಾಕಿಯನ್ನು ಸಂಗ್ರಹಿಸುವ ನೆಪದಲ್ಲಿ, ನಿಜಾಮರು ಹಾಗೂ ಮರಾಠರು ಮತ್ತೆಮತ್ತೆ ಮೈಸೂರಿನ ಮೇಲೆ ಧಾಳಿ ನಡೆಸಿದರು.

ಈ ವೇಳೆಗೆ, ಕರ್ನಾಟಕದ ಉತ್ತರ ಭಾಗಗಳಲ್ಲಿ ತಮ್ಮ ಅಧಿಕಾರವನ್ನು ಮರಾಠರು ಬಲಪಡಿಸಿಕೊಂಡಿದ್ದರು.ಅವರ ಮಿತ್ರರಾಜರಲ್ಲ ಸೋಂದಾ (ಸೋದೆ), ಕೆಳದಿ ಹಾಗೂ ಚಿತ್ರದುರ್ಗದ ಅರಸರು ಸೇರಿದ್ದರು. ಶಿವಾಜಿಯ ಕಾಲದಿಂದಲೂ ಕೆಳದಿಯವರು ಮರಾಠರೊಡನೆ ಸಂಧಾನವನ್ನು ಹೊಂದಿದ್ದರೆ, ಸೋಂದಾ ಚನ್ನಮ್ಮಾಜಿ ಸಹ ಛತ್ರಪತಿ ರಾಜರಾಮನ ಕಾಲದಿಂದಲೂ ಸಂಪರ್ಕವನ್ನು ಸ್ಥಾಪಿಸಿಕೊಂಡಿದ್ದು, ಮೊಗಲರ ವಿರುದ್ಧದ ಕ್ರಿ.ಶ.೧೬೯೫ರ ದೊಡ್ಡೇರಿ ಯುದ್ಧದ ದಿನಗಳಿಂದಲೂ, ಚಿತ್ರದುರ್ಗದ ಅರಸರು, ಮರಾಠರೊಂದಿಗೆ ಮೈತ್ರಿಯನ್ನು ಮಾಡಿಕೊಂಡಿದ್ದು, ಚಿತ್ರದುರ್ಗದ ನೆರವಿನಿಂದಾಗಿ, ಮರಾಠರು ಯುದ್ಧವನ್ನು ಗೆದ್ದರು. ತುಂಗಭದ್ರೆಯ ದಕ್ಷಿಣದ ಭಾಗಗಳನ್ನು ಹೊಕ್ಕ ಮರಾಠರು, ಈ ಪ್ರದೇಶದ ಅರಸರಿಂದ ನಿರಂತರವಾಗಿ ಕಪ್ಪವನ್ನು ಕೇಳುತ್ತಿದ್ದರು. ಮರಾಠರ ಶೋಷಣೆಯಿಂದ ಬಹಳಷ್ಟು ತೊಂದರೆಗೊಳಗಾದ ಸಂಸ್ಥಾನಗಳೆಂದರೆ, ಮೈಸೂರು ಹಾಗೂ ಕೆಳದಿ. ಮೈಸೂರಿನ ದಳವಾಯಿ ಸಹೋದರರಾದ ದೇವರಾಜ ಹಾಗೂ ನಂಜರಾಜ ದಳವಾಯತ್ವದಡಿ ನಡುವೆ ನಡೆದ ಕ್ರಿ.ಶ.೧೭೩೨-೫೯ವರೆಗಿನ ಸುದೀರ್ಘ ಕಾಲ ನಡೆದ ಕರ್ನಾಟಿಕ್ ಯುದ್ಧಗಳಿಂದ, ಮೈಸೂರು ಬಹುತೇಕವಾಗಿ ದಿವಾಳಿಸ್ಥಿತಿಗೆ ಇಳಿದಿತ್ತು. ದುರ್ಬಲಗೊಂಡ ಆರ್ಥಿಕ ಪರಿಸ್ಥಿತಿಯಿಂದ, ಮೈಸೂರು ಹಾಗೂ ಕೆಳದಿ ನರಳಿದವು, ಮಿಗಿಲಾಗಿ ಅಂತಿಮವಾಗಿ ಅವರ ಅಳಿವಿಗೆ ಕಾರಣವಾಯಿತು.

## ಹೈದರಾಲಿ



ಕೋಲಾರದ ಅನಕ್ಷರಸ್ಥ ಯುವಕ ನೋರ್ವ ದಳವಾಯಿ ನಂಜರಾಜಯ್ಯನಿಂದ ಮೈಸೂರು ಸೈನ್ಯಕ್ಕೆ ಸೇರ್ಪಡೆಗೊಂಡ ಹೈದರಾಲಿಯು ಸ್ವ ಸಾಮರ್ಥ್ಯದಿಂದ ಫೌಜ್‌ದಾರ್‌ನ ಮಟ್ಟಕ್ಕೆ ಬಡ್ತಿ ಪಡೆದನು. ಮೈಸೂರು ಸೇನೆಯಲ್ಲಿ, ಒಳ್ಳೆಯ ಸೈನಿಕ ಹಾಗೂ ನಾಯಕನಾಗಿ ಹೈದರ್ ಆಲಿಯು




ಹೈದರಾಲಿ ಜನ್ಮಸ್ಥಳ, ಬೂದಿಕೋಟೆ, ಕೋಲಾರ ಜಿಲ್ಲೆ

ಟಿಪ್ಪು ಸುಲ್ತಾನ್ ಅರಮನೆ, ಬೆಂಗಳೂರು





ದರಿಯಾ ದೌಲತ್
ಶ್ರೀರಂಗ ಪಟ್ಟಣ

ಗುರುತಿಸಲ್ಪಟ್ಟಿದ್ದನು. ಕ್ರಿ.ಶ.೧೭೬೧ರಲ್ಲಿ, ಶ್ರೀರಂಗಪಟ್ಟಣದಲ್ಲಿದ್ದ ಮೈಸೂರು ಸೈನ್ಯದ ಸೈನಿಕರು, ವೇತನ ನೀಡಲು ವಿಳಂಬವಾದಾಗ ದಂಗೆಯೆದ್ದರು. ಅಂದಿನ ಅರಸನಾದ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗದ ಕಾರಣ, ಅದರ ಹೊಣೆಕೆಯನ್ನು ಹೈದರ್ ಆಲಿಗೆ ಒಪ್ಪಿಸಿದಾಗ ಅದನ್ನು ಹೈದರಾಲಿಯು ನಿವಾರಣೆ ಮಾಡಿದನು. ತನ್ನ ಒಡೆಯನಾದ ದಳವಾಯಿ ನಂಜರಾಜಯ್ಯನು ಆ ಕಾಲಕ್ಕೆ ಬಹಳ ಮುದುಕನಾಗಿದ್ದ ಕಾರಣ, ಅವನನ್ನು ಎಲ್ಲ ಹೊಣೆಗಾರಿಕೆಗಳಿಂದ ಮುಕ್ತಗೊಳಿಸಿ, ನಿವೃತ್ತ ಬದುಕನ್ನು ಕಳೆಯಲು ಹಾಸನ ಜಿಲ್ಲೆಯ ಕೊಣನೂರಿಗೆ ಕಳುಹಿಸಿದನು.

ಹೈದರ್ ಆಲಿಯು ಮೈಸೂರು ರಾಜ್ಯದ ಎಲ್ಲ ವಿಷಯಗಳ ಮುಖ್ಯಸ್ಥನಾಗಿ (ಸರ್ವಾಧಿಕಾರಿ) ತನ್ನನ್ನು ತಾನು ನಿಯುಕ್ತಗೊಳಿಸಿಕೊಂಡು, ಕರ್ನಾಟಕ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಅತ್ಯಂತ ಬಲಿಷ್ಠ ಆಡಳಿತಗಾರನಾಗಿ ತನ್ನನ್ನು ತಾನು ನಿರೂಪಿಸಿಕೊಂಡನು. ಕ್ರಿ.ಶ.೧೭೬೧ ಮೂರನೆಯ ಪಾಣಿಪಟ್ ಯುದ್ಧದಲ್ಲಿ ಉಂಟಾದ ಮರಾಠರ ಹಿನ್ನಡೆಯೂ, ಕರ್ನಾಟಕದಲ್ಲಿ ಹೈದರ್ ಆಲಿಯು ಉತ್ತುಂಗಕ್ಕೆ ಏರಲು ಸಾಧ್ಯವಾಯಿತು.

ಕ್ರಿ.ಶ. ೧೭೬೧ರ ಪಾಣಿಪಟ್ ಯುದ್ಧದಲ್ಲಿ, ಮರಾಠರು ಅನುಭವಿಸಿದ ಸೋಲು, ಹೈದರ್ ಅಲಿಗೆ ಆಕ್ರಮಣಕಾರಿ ನೀತಿಯನ್ನು ಪಾಲಿಸಲು ಪ್ರೇರೇಪಿಸಿತು. ಕೆಳದಿಯ ರಾಜ್ಯವನ್ನು ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸುವ ಮೂಲಕ ಮೈಸೂರನ್ನು ಎಲ್ಲ ದಿಕ್ಕುಗಳಲ್ಲೂ ವಿಸ್ತರಿಸಿದನು. ಅಶ್ವದಳವನ್ನು ಬೃಹತ್ ಪ್ರಮಾಣದಲ್ಲಿ ಬಳಸಿ, ಮೈಸೂರು ರಾಜ್ಯದಿಂದ ೮೦,೦೦೦ ಚದರ ಮೈಲಿಗಳ ಕ್ಷೇತ್ರವನ್ನು ಪಡೆದನು. ಬೆಂಗಳೂರಿನ ಕೋಟೆಯನ್ನು ಸುಭದ್ರಗೊಳಿಸಿ, ಲಾಲ್‌ಬಾಗ್ ತೋಟವನ್ನೂ, ಶ್ರೀರಂಗಪಟ್ಟಣದಲ್ಲಿ ದರಿಯಾ ದೌಲತ್ ಅರಮನೆಯನ್ನೂ ನಿರ್ಮಿಸಿ, ಅದರ ಸುತ್ತಲೂ ಉದ್ಯಾನವನವನ್ನು ನಿರ್ಮಾಣ ಮಾಡಿಸಿದನು. ತಮಿಳುನಾಡಿನಲ್ಲಿ ಬ್ರಿಟಿಷರಿಗೆ ಸವಾಲೆಸೆದು, ಅವರನ್ನು ಸೋಲಿಸಿದನು; ಆದರೆ, ಒಂದಕ್ಕಿಂತ ಹೆಚ್ಚು ಬಾರಿ, ಮರಾಠ ಪೇಶ್ವೆ ಮಾಧವರಾವ್‌ನಿಂದ ಅವಮಾನಿತನಾದನು.ಬ್ರಿಟಿಷರ ವಿರುದ್ಧ, ಹೈದರನು ಫ್ರೆಂಚ್‌ರೊಂದಿಗೆ ಸಂಧಾನ ಮಾಡಿಕೊಂಡು, ಪ್ರಥಮ ಆಂಗ್ಲ–ಮೈಸೂರು ಯುದ್ಧದಲ್ಲಿ ಅವರನ್ನು ಯಶಸ್ವಿಯಾಗಿ ವಿರೋಧಿಸಿದನು. ಮಂಗಳೂರಿನ ಸುಲ್ತಾನ್ ಬತೇರಿಯ ಬಳಿ, ಬಲಿಷ್ಠ ನೌಕಾ ಪಡೆಯನ್ನು ಸ್ಥಾಪಿಸಿದ್ದನು.ಕ್ರಿ.ಶ.೧೭೭೯ರಲ್ಲಿ, ಚಿತ್ರದುರ್ಗದ ಮದಕರಿ ಕುಟುಂಬದಿಂದ ಚಿತ್ರದುರ್ಗದ ಸಂಸ್ಥಾನವನ್ನು ಸ್ವಾಧೀನಪಡಿಸಿಕೊಂಡನು. ಎರಡನೆಯ ಆಂಗ್ಲ–ಮೈಸೂರು ಯುದ್ಧದಲ್ಲಿ, ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದಾಗ, ಆರ್ಕಾಟ್ ಬಳಿಯ ನರಸಿಂಗರಾಯ ಪೇಟೆಯಲ್ಲಿ, ಕ್ರಿ.ಶ.೧೭೮೨ರಲ್ಲಿ ಹೈದರ್ ಆಲಿಯು ಕೊನೆಯುಸಿರೆಳೆದನು.

ಹೈದರ್ ಆಲಿಯ ಯತ್ನಗಳಿಂದ, ಮೈಸೂರು ರಾಜ್ಯದ ಗಡಿಗಳು ವಿಸ್ತರಣೆಗೊಂಡು, ಸಂಪೂರ್ಣ ದಕ್ಷಿಣ ಭಾರತದಲ್ಲೇ ಅತ್ಯಂತ ಬಲಿಷ್ಠ ರಾಜಕೀಯ ಅಸ್ತಿತ್ವವನ್ನು ಹೊಂದಿತು. ಮೈಸೂರು ಅರಸರು ಹೈದರ್ ಆಲಿಯಿಂದ ಗೌರವವನ್ನು ಪಡೆದಿದ್ದರೂ, ಅವರನ್ನು ನೇಪಥ್ಯಕ್ಕೆ ಸರಿಸಲಾಗಿತ್ತು.

## ಟಿಪ್ಪೂ ಸುಲ್ತಾನ್

ಕ್ರಿ.ಶ.೧೭೮೨–೯೯ರವರೆಗೆ ಆಳಿದ ಟಿಪ್ಪು ಸುಲ್ತಾನನು, ತನ್ನ ತಂದೆಯ ಮರಣದ ನಂತರ, ಅಧಿಕಾರವನ್ನು ವಹಿಸಿಕೊಂಡನು.ಮೂರನೆಯ ಹಾಗೂ ನಾಲ್ಕನೆಯ ಆಂಗ್ಲ–ಮೈಸೂರು ಯುದ್ಧಗಳಲ್ಲಿ ಹೋರಾಡುವ ಮೂಲಕ, ತನ್ನ ತಂದೆಯ ಬ್ರಿಟಿಷ್–ವಿರೋಧಿ ಯುದ್ಧನೀತಿಯನ್ನು ಮುಂದುವರಿಸಿ, ಬ್ರಿಟಿಷರ ಹೊಡೆದೋಡಿಸುವ ಕನಸನ್ನು ಕಂಡನು. ಫ್ರೆಂಚ್ ಅರಸನಾದ ನೆಪೋಲಿಯನ್, ಟರ್ಕಿ ಮತ್ತು ಆಫ್ಘಾನಿಸ್ತಾನಗಳ ನೆರವನ್ನೂ ಕೋರಿದನು.ಟಿಪ್ಪುವು ವಿದ್ವಾಂಸನೂ, ನಿರ್ಭಿಡೆಯಾದ ಸೇನಾಧಿಪತಿಯೂ ಆಗಿದ್ದನು.ಮೈಸೂರು ರಾಜ್ಯದಲ್ಲಿ ರೇಷ್ಮೆ ವ್ಯವಸಾಯವನ್ನು ಪರಿಚಯಿಸಿದನು ಅಲ್ಲದೆ, ಗುಣಮಟ್ಟದ ಕಾಗದ, ಸಂಗೀತ ವಾದ್ಯಗಳಿಗೆ ಸ್ಟೀಲ್ ತಂತಿಗಳು, ಸಕ್ಕರೆ ಹಾಗೂ ಸಕ್ಕರೆ ಮಿಠಾಯಿಗಳ ಉತ್ಪಾದನಾ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮಗಳನ್ನು ಕೈಗೊಂಡನು. ಸಾಗರೋತ್ತರ ವ್ಯಾಪಾರವನ್ನು ಉತ್ತೇಜಿಸಲು ಆತನು ಬಹಳ ಉತ್ಸುಕನಾಗಿದ್ದನು, ರಾಜ್ಯ ಸರ್ಕಾರದ ವತಿಯಿಂದ ವ್ಯಾಪಾರ ಪ್ರಾರಂಭಿಸಿ ತನ್ನ ರಾಜ್ಯದ ವಿವಿಧೆಡೆಗಳಲ್ಲಿ ಅಂಗಡಿ, ಉಗ್ರಾಣಗಳನ್ನು ಸ್ಥಾಪಿಸುವುದಲ್ಲದೆ, ಕಚ್, ಕರಾಚಿ ಹಾಗೂ ಕೊಲ್ಲಿಯ ಬಸ್ರಾದಲ್ಲೂ ಅವುಗಳನ್ನು ಸ್ಥಾಪಿಸಿದನು. ಆತನಿಗೆ ಕುತೂಹಲಕಾರಿ(ಕೌತುಕದ) ಮನಸ್ಸಿದ್ದು ಆಡಳಿತದಲ್ಲಿ ವಿನೂತನ ವಿಧಾನಗಳನ್ನು ಪರಿಚಯಿಸಲು ಉತ್ಸುಕನಾಗಿದ್ದನು. ಆದರೆ, ಬ್ರಿಟಿಷರನ್ನು ಹೊಡೆದೋಡಿಸುವ ಅವನ ಕನಸು ನನಸಾಗದೆ, ಕ್ರಿ.ಶ.೧೭೯೯ರಲ್ಲಿ, ಶ್ರೀರಂಗಪಟ್ಟಣದಲ್ಲಿ ನಡೆದ ಆಂಗ್ಲ–ಮೈಸೂರು ಯುದ್ಧದಲ್ಲಿ, ಬ್ರಿಟಿಷರ ವಿರುದ್ಧ ಹೋರಾಡುತ್ತ ಮಡಿದನು. ಮೈಸೂರು ಬ್ರಿಟೀಷರ ಪಾಲಾಗಿ ಅದರ ಕೆಲವು ಭಾಗಗಳನ್ನು ಹಾಗೂ ಈ ಯತ್ನದಲ್ಲಿ ಅವರಿಗೆ ನೆರವಾಗಿದ್ದ ಮಿತ್ರರಾದ ಮರಾಠರು, ನಿಜಾಮರಿಗೆ ಹಂಚಿದರು. ಭೌಗೋಳಿಕವಾಗಿ ಗಣನೀಯ ಪ್ರಮಾಣದಲ್ಲಿ ಕಿರಿದುಗೊಂಡ ಮೈಸೂರು ರಾಜ್ಯದ ಅರಸನಾಗಿ, ರಾಜಕುಮಾರನಾದ ಮುಮ್ಮಡಿ ಕೃಷ್ಣರಾಜ ಒಡೆಯರ್‌ಗೆ ೧೭೯೯ರಲ್ಲಿ ಪಟ್ಟಾಭಿಷೇಕ ಮಾಡಿದರು.

## ಕೊಡಗಿನ (ಕೂರ್ಗ್) ನಾಯಕರು

ಸುಂದರ ಭೂ ವಿನ್ಯಾಸ ಹಾಗೂ ತಂಪಾದ ಹವಾಮಾನವನ್ನು ಪಡೆದ ಮನಮೋಹಕ ಕೊಡಗು, ತಮ್ಮ ಯುದ್ಧ ಕೌಶಲ್ಯ ಹಾಗೂ ಚೈತನ್ಯಗಳಿಗೆ ಹೆಸರುವಾಸಿಯಾದ ಕೊಡವರೆಂಬ ವಿಶಿಷ್ಟ ಜನಾಂಗವನ್ನು ಹೊಂದಿದೆ. ಸಣ್ಣ ಸಂಸ್ಥಾನವಾದರೂ, ಆಧುನಿಕ ಕರ್ನಾಟಕದ ಚರಿತ್ರೆಯಲ್ಲಿ, ಅದು ಗಣನೀಯ ಪಾತ್ರವನ್ನು ವಹಿಸಿತು.

ಕೆಳದಿಯ ನಾಯಕರ ವಂಶಸ್ಥರೆಂದು ಘೋಷಿಸಿಕೊಂಡ ಹಾಲೇರಿ ಕುಟುಂಬದ ಸದಸ್ಯರು, ಕೊಡಗನ್ನು ಸ್ವತಂತ್ರ ಸಂಸ್ಥಾನವಾಗಿ ಸ್ಥಾಪಿಸಿದರು.ಈ ರಾಜವಂಶದ ಪ್ರಥಮ ಗಣ್ಯ ರಾಜನಾದ ಮುದ್ದುರಾಜನು, ಆ ಮನೆತನದ ಮೂರನೆಯ ತಲೆಮಾರಿನವನಾಗಿದ್ದು ಕ್ರಿ.ಶ.೧೬೩೩–

೮೭ರವರೆಗೆ ರಾಜ್ಯವಾಳಿದ ಇವನು, ಮಡಿಕೇರಿಯನ್ನು ಕ್ರಿ.ಶ.೧೬೮೧ರಲ್ಲಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.ಆತನ ಮಗನಾದ ದೊಡ್ಡವೀರಪ್ಪನು ಕ್ರಿ.ಶ.೧೬೮೭–೧೭೩೬ರವರೆಗೆ ರಾಜ್ಯವಾಳಿ, ಮೈಸೂರಿನ ಚಿಕ್ಕದೇವರಾಯನು ಕೊಡಗನ್ನು ನಿಗ್ರಹಿಸುವ ಯತ್ನಗಳನ್ನು ವಿರೋಧಿಸಿದ್ದಲ್ಲದೆ, ಐಗೂರಿನ ಬಾಲಂನ ಅರಸರಿಂದ, ಏಳುಸಾವಿರಸೀಮೆಯನ್ನೂ (ಶನಿವಾರಸಂತೆ) ದಕ್ಕಿಸಿಕೊಂಡನು. ದೊಡ್ಡವೀರಪ್ಪನ ಮೊಮ್ಮಗನಾದ ಚಿಕ್ಕವೀರಪ್ಪನು ( ಕ್ರಿ.ಶ.೧೭೩೬–೬೦) ಕೊಡಗನ್ನು ವಶಪಡಿಸಿಕೊಳ್ಳ




ಕೋಟೆಯ ಪ್ರವೇಶದ್ವಾರ, ಶ್ರೀರಂಗಪಟ್ಟಣ

ಬೇಕೆಂಬ ಹೈದರ್ ಆಲಿಯ ಯತ್ನಗಳನ್ನು ಬಲವಾಗಿ ವಿರೋಧಿಸಿದನು. ಕೊಡಗಿನ ಅರಸರ ಸ್ನೇಹವನ್ನು ಸಂಪಾದಿಸುವ ಸಲುವಾಗಿ, ಹೈದರ್ ಆಲಿಯು ಸುಳ್ಯದ ಪಕ್ಕಕ್ಕೆ ಇದ್ದ ಪ್ರದೇಶಗಳಾದ ಪಾಂಜ ಹಾಗೂ ಬೆಳ್ಳಾರೆಗಳನ್ನು ಕೊಡಗಿನ ರಾಜನಿಗೆ ನೀಡಿದನು.

ಈ ರಾಜವಂಶದ ಮತ್ತೊಬ್ಬ ಪ್ರಮುಖ ರಾಜನಾದ ಲಿಂಗರಾಜನು, ದೇವಪ್ಪ ರಾಜನೊಂದಿಗೆ ಇದ್ದ ಉತ್ತರಾಧಿಕಾರದ ವಿವಾದವನ್ನು ಹತ್ತಿಕ್ಕಲು ಹೈದರ್ ಆಲಿಯ ನೆರವನ್ನು ಕೇಳಿದನು. ಕ್ರಿ.ಶ.೧೭೭೫ರಲ್ಲಿ ಲಿಂಗರಾಜನು ಸಿಂಹಾಸನವನ್ನು ಏರಿದರೂ, ಮೈಸೂರಿನ ಸಾಮಂತನಾಗಿ ರಾಜ್ಯಭಾರ ಮಾಡಬೇಕಾಯಿತು. ಕ್ರಿ.ಶ.೧೭೮೦ರಲ್ಲಿ, ಆತನ ಇಬ್ಬರು ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳನ್ನು ಹೈದರ್ ಆಲಿಯು ಗೋರೂರಿನಲ್ಲಿ ಬಂಧನದಲ್ಲಿ ಇರಿಸಿ, ಕೊಡಗಿನ ಆಡಳಿತಗಾರರಾಗಿ, ಹೈದರ್ ಆಲಿಯು ತನ್ನ ಅಧಿಕಾರಿಗಳನ್ನೇ ನೇಮಿಸಿದನು. ಹೈದರ್ ಆಲಿಯ ವರ್ತನೆಯಿಂದ ಕುಪಿತರಾದ ಕೊಡಗಿನ ಜನರು, ಮೈಸೂರಿನ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು, ಕರ ಸಂದಾಯ ಮಾಡಲು ನಿರಾಕರಿಸಿ, ಆತನ ಅಧಿಕಾರಿಗಳನ್ನು ಕೊಡಗಿನಿಂದ ಹೊಡೆದೋಡಿಸಿದರು.


ಹೈದರ್ ಆಲಿಯ ಮರಣದ ನಂತರ, ಇಬ್ಬರು ರಾಜಕುಮಾರರನ್ನು ಗೊರೂರಿನಿಂದ ಪೆರಿಯಪಟ್ಟಣಕ್ಕೆ ಸ್ಥಳಾಂತರಗೊಳಿಸಿ ತನ್ನ ಅಧಿಕಾರವನ್ನು ಕೊಡಗು ಪ್ರದೇಶದ ಮೇಲೆ ಬಲವಂತವಾಗಿ ಹೇರಲು, ದೃಢವಾದ

ಕ್ರಮಗಳನ್ನು ಟಿಪ್ಪು ಕೈಗೊಂಡನು. ಹೊಸ ಕೋಟೆಗಳ ನಿರ್ಮಾಣ, ಹಳೆಯ ಕೋಟೆಗಳ ಬಲವರ್ಧನೆ ಹಾಗೂ  ಕಟ್ಟಡಗಳ ಮೇಲ್ವಿಚಾರಣೆಗಾಗಿ ತನ್ನ ಸ್ವಂತ ಜನರನ್ನು ನೇಮಕ ಮಾಡಿದನು. ಲಿಂಗರಾಜನ ರಾಜವಂಶದ ಬಹುತೇಕ ಜನರು ಪೆರಿಯಪಟ್ಟಣದ ಸೆರೆವಾಸದಲ್ಲಿ ಮಡಿದರೆ, ಕ್ರಿ.ಶ.೧೭೮೮ರಲ್ಲಿ, ಇಬ್ಬರು ರಾಜಕುಮಾರರ ಪೈಕಿ ಒಬ್ಬನಾದ ದೊಡ್ಡ ವೀರಪ್ಪಾಜಿಯು ಬಂಧನದಿಂದ ತಪ್ಪಿಸಿಕೊಂಡನು. ಆ ಪ್ರದೇಶದಲ್ಲಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಲು, ಗೆರಿಲ್ಲಾ ಯುದ್ಧ ವಿಧಾನ ಅನುಸರಿಸುವ ಮೂಲಕ ಟಿಪ್ಪು ಸುಲ್ತಾನನ ಯತ್ನಗಳನ್ನು ತಡೆದು, ಕೊಡಗಿನ ತನ್ನನ್ನು ರಾಜನಾಗಿ ಸ್ಥಾಪನೆ ಮಾಡಿಕೊಂಡನು. ಆದರೆ ಮೂರನೆಯ ಆಂಗ್ಲ–ಮೈಸೂರು ಯುದ್ಧದಲ್ಲಿ, ಕೊಡಗಿನಿಂದ ಸಂಪೂರ್ಣವಾಗಿ ಆತನನ್ನು ಬ್ರಿಟಿಷರು ಬಗ್ಗುಬಡಿದರು.

ಕ್ರಿ.ಶ.೧೮೦೯ರಲ್ಲಿ ವೀರರಾಜನ ಮರಣದ ನಂತರ, ದೇವಮ್ಮಾಜಿ ಆತನ ಉತ್ತರಾಧಿಕಾರಿಯಾದಳು, ಆದರೆ, ಆಕೆಯ ಉತ್ತರಾಧಿಕಾರತ್ವದ ಘೋಷಣೆಯು, ದಕ್ಷ ಆಡಳಿತಗಾರನಾದ ಆತನ ಚಿಕ್ಕಪ್ಪನಿಂದ ತಳ್ಳಿಹಾಕಲಾಯಿತು.ಆತನ ಕಾಲದ ದಾಖಲೆ, ಅಂದರೆ ಆತನು ಹೊರಡಿಸಿದ ಹುಕುಮ್ ನಾಮವು, ರಾಜ್ಯದ ಆಡಳಿತವನ್ನು ನಡೆಸುವ ಆತನ ಅಧಿಕಾರಿಗಳಿಗೆ ೫೨ ಸ್ಪಷ್ಟ ಸೂಚನೆಗಳನ್ನು ಒಳಗೊಂಡಿದೆ.ಕ್ರಿ.ಶ.೧೮೨೦ರಲ್ಲಿ, ಆತನು ಮಡಿಕೇರಿಯಲ್ಲಿ ಓಂಕಾರೇಶ್ವರ ದೇವಾಲಯದ ನಿರ್ಮಾಣವನ್ನು ಮಾಡಿದನು.

ಚಿಕ್ಕವೀರರಾಜೇಂದ್ರನು ಈ ರಾಜವಂಶದ ಕೊನೆಯ ಅರಸನಾಗಿದ್ದನು. ತನ್ನ ಕ್ರೂರ ಪ್ರವರ್ತನೆಗಳಿಂದ, ಆತನು ಅಪಖ್ಯಾತಿಯನ್ನು ಪಡೆದನು.ಆತನ ಸ್ವಂತ ತಂಗಿ ಹಾಗೂ ಭಾವ, ಆತನ ವಿರುದ್ಧ ಬ್ರಿಟಿಷರಿಗೆ ದೂರು ಸಲ್ಲಿಸಿದರು.ಚಿಕ್ಕವೀರರಾಜೇಂದ್ರನು ಕೊಡಗಿನಲ್ಲಿ ಬ್ರಿಟಿಷ್–ವಿರೋಧಿ ಚಳವಳಿಯನ್ನು  ಉತ್ತೇಜಿಸಿ, ಅವರ ವಿರುದ್ಧ ಯುದ್ಧಕ್ಕಾಗಿ ಸನ್ನದ್ಧನಾದನು.ಆತನು ತನ್ನ ಸೈನ್ಯದಲ್ಲಿ, ವಿಶೇಷವಾಗಿ ಚಿತ್ರದುರ್ಗ ಹಾಗೂ ರಾಯದುರ್ಗದ ಬೇಡ ಸಮುದಾಯದ ಯುವಕರನ್ನು ತುಂಬಿಸಿಕೊಂಡನು. ಮೈಸೂರಿನಲ್ಲಿ ದಂಗೆಯೆದ್ದ ಪಾಳೆಗಾರನೊಬ್ಬನಿಗೆ ಆಶ್ರಯ ನೀಡಿದನು. ಮದ್ರಾಸಿನ ಬ್ರಿಟಿಷ್ ರಾಜ್ಯಪಾಲರು ಆತನಿಗೆ ನೀಡಿದ ಎಚ್ಚರಗಳಿಗೆ ಕಿವಿಗೊಡದೆ, ತನ್ನ ವರ್ತನೆಯಿಂದ ಬ್ರಿಟಿಷರನ್ನು ಛೇಡಿಸಿ, ಕ್ರಿ.ಶ.೧೮೩೪ರಲ್ಲಿ, ಬ್ರಿಟಿಷರ ವಿರುದ್ಧ ಘೋಷಣೆ ಹೊರಡಿಸಿದನು. ತಕ್ಷಣವೇ, ಬ್ರಿಟಿಷರು ಕೊಡಗನ್ನು ಸ್ವಾಧೀನಪಡಿಸಿಕೊಂಡರು, ಚಿಕ್ಕವೀರರಾಜೇಂದ್ರನು, ಅವರ ಸಮ್ಮುಖದಲ್ಲಿ ದೈನ್ಯದಿಂದ, ಬಲವಂತವಾಗಿ ಶರಣಾಗತನಾದನು; ನಂತರ ಅವನನ್ನು ವಾರಣಾಸಿಗೆ ಕಳುಹಿಸಿದರು.

ಕ್ರಿ.ಶ.೧೮೩೫–೩೭ಗಳ ನಡುವೆ, ಕೊಡಗು ಬ್ರಿಟಿಷ್–ವಿರೋಧಿ ಚಳವಳಿಗಳ ಪ್ರವಾಹವನ್ನೇ ಕಂಡಿತು. ಮದ್ರಾಸಿನ ರಾಜ್ಯಪಾಲರು ಕೊಡಗಿಗಾಗಿ ಮೇಲ್ವಿಚಾರಕ ಕಮೀಷನರ್‌ರನ್ನು ನೇಮಕ ಮಾಡಿದರು. ಕೊಡಗಿನ ವಿದ್ಯಮಾನಗಳನ್ನು, ಕೊಡಗಿನ ಕಮೀಷನರ್ ಕೂಡ


ಓಂಕಾರೇಶ್ವರ ದೇವಾಲಯದ ಮನಮೋಹಕ ನೋಟ, ಮಡಿಕೇರಿ

ಆದ ಮೈಸೂರಿನ ಕಮೀಷನರ್‌ರಿಗೆ ವರದಿ ಮಾಡುವಂತೆ ಆದೇಶಿಸಲಾಯಿತು.ಇದಾದ ಬಹಳ ಸಮಯದ ನಂತರ, ೧೮೪೦ರಲ್ಲಿ, ಕೊಡಗಿನ ಆಡಳಿತದ ಉಸ್ತುವಾರಿಯನ್ನು ವಹಿಸಲು, ಪೂರ್ಣ-ಸಮಯದ ಮುಖ್ಯ ಕಮೀಷನರ್‌ರನ್ನು ನೇಮಕ ಮಾಡಲಾಯಿತು. ಭಾರತ ಸ್ವಾತಂತ್ರ್ಯದ ನಂತರ, ಸಂವಿಧಾನದ ಅಡಿಯಲ್ಲಿ, ಕೊಡಗು 'ಸಿ' ವರ್ಗದ ರಾಜ್ಯವಾಯಿತು. ಆನಂತರ ೧೯೫೨-೫೬ರವರೆಗೆ ಸಿ.ಎಮ್.ಪೂಣಚ್ಚರವರು ಕೊಡಗು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾಗಿದ್ದರು.



*ರಾಜಗೋರಿಗಳು, ಮಡಿಕೇರಿ, ಕೂರ್ಗ್ ಜಿಲ್ಲೆ*